ಇಂದು ದಿನಾಂಕಃ 14.02.2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಕೀಲರಿಂದಃ

ದಾವಾ ಷೆಡ್ಯೂಲ್ ನಲ್ಲಿ ಗಾಣಿಗರ ಮೊಗಣ್ಣ ದಕ್ಷಿಣ ಭಾಗದಲ್ಲಿ ಇದ್ದಾರೆ ಎಂದು ನಮೂದಿಸಿದ್ದಿರಾ ಎಂದರೆ ನಮೂದಿಸಿರುವುದಿಲ್ಲ. ಜಮೀನಿನ ಸರ್ವೆ ನಂಃ 31/1 ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಹಾಜರು ಮಾಡಿರುತ್ತೇನೆ. ಓ ಎಸ್ 272/2009 ರ ದಾವೆಯಲ್ಲಿ ಇರುವ ಪುಟ್ಟಸ್ವಾಮಾಚಾರ್ ಯಾರು ಎಂದರೆ ನಮ್ಮ ಚಿಕ್ಕಪ್ಪ. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ಪುಟ್ಟಸ್ವಾಮಾಚಾರ್ ಇಬ್ಬರು ವಾದಿಗಳು ಆಗಿದ್ದರು ಎಂದರೆ ಸರಿ. ಪುಟ್ಟಸ್ವಾಮಾಚಾರ್ ರವರು ಸರ್ವೆ ನಂಃ 31/1 ಅಲ್ಲ ಅದು ಹೌಸ್ ಲೀಸ್ಟ್ ನಂಃ 31/1 ಆಗಿರುತ್ತದೆ ಎಂದು ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಹೌಸ್‌ಲೀಸ್ಟ್ ನಂಃ 31 ಎಷ್ಟು ಹಿಸ್ಸೆ ಆಗಿದೆ ಗೊತ್ತೇ ಎಂದರೆ ನಾವು ಯಾರಿಗೂ ಹಿಸ್ಸೆಯನ್ನು ಮಾಡಿರುವುದಿಲ್ಲ. ಸರ್ವೆ ನಂಃ 30/2, 31/1 ಮತ್ತು 31/2 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ, ಸರ್ವೆ ನಂಃ 30/2 ರ ಸಂಖ್ಯೆ ಬೇರೆ ಇರುತ್ತದೆ. ಸದರಿ ಆಸ್ತಿಗಳ ಮಾಲೀಕತ್ವ ನಮಗೆ ಹೇಗೆ ಬಂದಿರುತ್ತದೆ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಹಾಜರು ಮಾಡಿರುತ್ತೇನೆ. ನಿಪಿ.5 ಯಾವ ವರ್ಷದು ಎಂದು ಹೇಳಲು ಆಗುತ್ತದೆಯೇ ಎಂದರೆ 1931-32 ನೇ ಸಾಲಿನ ದಾಖಲೆ ಆಗಿರುತ್ತದೆ. ನಿಪಿ.5 ರಲ್ಲಿ ನಮೂದು ಆಗಿರುವ ಆಸ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಅಸೆಸ್‌ಮೆಂಟ್ ಮತ್ತು ನಮೂನೆ 9 ಮತ್ತು 11 ಎ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದಿರಾ ಎಂದರೆ ನಮ್ಮ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿಗೆ ತಾನು ಹಾಜರು ಮಾಡಿರುವ ದಾಖಲೆಗಳಲ್ಲಿ ಗುರುತಿಸುವಂತೆ ಸೂಚಿಸಿದಾಗ ಸಾಕ್ಷಿಯು ತಾನಗಿ ಬಿ ಪಿ ಇರುವುದರಿಂದ ಕಣ್ಣು ಮಂಜೂಗಿರುತ್ತದೆ ಆದ್ದರಿಂದ ದಾಖಲೆಗಳನ್ನು ಗುರುತಿಸಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಸಾಕ್ಷಿಯು ತನಗೆ ತೋರಿಸಿದ ದಾಖಲೆಗಳನ್ನು ಓ ಎಸ್ 272/2009 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳೆಂದು ಒಪ್ಪಿಕೊಂಡಿದ್ದು ಅವುಗಳನ್ನು ನಿಡಿ2 ಮತ್ತು 3 ಎಂದು ಗುರುತಿಸಲಾಯಿತು. ನನ್ನ ತಂದೆ ಮತ್ತು ಇತರರು 4 ನೇ ಪ್ರತಿವಾದಿಯ ವಿರುದ್ಧ ಓ ಎಸ್ 97/2000 ದಂತೆ ದಾವೆಯನ್ನು ಸಲ್ಲಿಸಿದ್ದು ಅದರಲ್ಲಿ ಪುಟ್ಟಚಾರಿ ಏನು ತಕರಾರನ್ನು ಸಲ್ಲಿಸಿದ್ದಾರೆ ಎಂದು ನೀವು ತಿಳಿದುಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿಲ್ಲ. ಪುಟ್ಟಚಾರಿ ರವರು ತಮ್ಮ ತಕರಾರಿನಲ್ಲಿ ದಾವಾ ಆಸ್ತಿಯ ಬಗ್ಗೆ 8 ಇಂಟು 12 ಗಜ ಆಸ್ತಿ ನನಗೆ ಕ್ರಯದ ಮೂಲಕ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ನಾವು

ಯಾರಿಗೂ ಕ್ರಯ ಮಾಡಿಲ್ಲ ಪ್ರಸ್ತುತ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಓ ಎಸ್ **272/2009** ರಲ್ಲಿ **6** ನೇ ಪ್ರತಿವಾದಿ ಅಂದರೆ ಪ್ರಸ್ತುತ ದಾವೆಯನ್ನು **1** ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ತಿಳಿದುಕೊಂಡಿದ್ದಿರಾ ಎಂದರೆ ತಿಳಿದುಕೊಂಡಿದ್ದೇನೆ. ಸದರಿ ತಕರಾರಿನಲ್ಲಿ **6** ನೇ ಪ್ರತಿವಾದಿ ನಮ್ಮ ತಾತನ ಸಿದ್ಧಚಾರಿ ದಿಃ **18.07.1963** ರಂದು ಮಹಾದೇವಮ್ಮ ರವರಿಗೆ **8** ಇಂಟು **16** ಗಜ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದು ಎಂದು ನಮೂದಿಸಿದ್ದಾರೆ ಎಂದರೆ ಸರಿ. ಆದರೆ ಸಾಕ್ಷಿಯು ಮುಂದುವರೆದು ನಾವು ಮಾರಾಟ ಮಾಡಿಲ್ಲವೆಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಮಹಾದೇವಮ್ಮ ರವರು **100** ರೂ ಗಳಿಗೆ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಸ್ವತ್ತನ್ನು ಮಹಾದೇವಮ್ಮ ರವರಿಂದ ಪ್ರಸ್ತುತ ದಾವೆಯ **1** ನೇ ಪ್ರತಿವಾದಿ ಅಂದರೆ ಓ ಎಸ್ **272/2009** ರ **6** ನೇ ಪ್ರತಿವಾದಿ ದಿಃ **08.12.1969** ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಚಕ್ಕುಬಂಧಿ ಪೈಕಿ ದಿಃ **18.06.1970** ರಂದು ನನ್ನ ತಾತರವರಿಂದ ಆರ್ ಎಸ್ ಲಿಂಗಣ್ಣಸ್ವಾಮಿ ಅಲಿಯಾಸ್ ಲಿಂಗಚಾರಿಯವರಿಂದ **12** ಇಂಟು **11** ಗಜ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಪ್ರಸ್ತುತ ದಾವೆಯ **1** ನೇ ಪ್ರತಿವಾದಿ ಲಿಂಗಣ್ಣಸ್ವಾಮಿಯವರ ಹೆಂಡತಿ ಕಮಲಮ್ಮ ರವರಿಂದ ದಿಃ **05.05.2004** ರಂದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಬೇರೆ ಸರ್ವೆ ನಂಬರ್ ಜಮೀನನ್ನು ಖರೀದಿಸಿರುತ್ತಾರೆ. ಮೇಲೆ ಸೂಚಿಸಿದ ವಿಚಾರಗಳ ಬಗ್ಗೆ ನನಗೆ ಮನವರಿಕೆಯಾಗಿದೆ ಎಂದರೆ ಸಾಕ್ಷಿಯು ಸರ್ವೆ ನಂಃ **31/1** ಕ್ಕೆ ಸಂಬಂಧಿಸಿದಂತೆ ಪಕ್ಕಾ ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಓ ಎಸ್ **272/2009** ರಲ್ಲಿ ನನ್ನ ತಂದೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಈ ಸಂದರ್ಭದಲ್ಲಿ ನಾನು ಇರಲಿಲ್ಲ. ನಂತರದಲ್ಲಿ ನನ್ನ ತಂದೆಗೆ ಆರೋಗ ಸರಿ ಇಲ್ಲವೆಂದು ನನ್ನ ಹೇಳಿಕೆಯನ್ನು ಪರಿಗಣಿಸಬೇಕೆಂದು ನಾನು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಯು ತನ್ನ ಹೇಳಿಕೆಯ ದೃಢೀಕೃತ ನಕಲನ್ನು ಗುರುತಿಸಿರುತ್ತಾರೆ, ಆದ್ದರಿಂದ ಅದನ್ನು ನಿಡಿ.**4** ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯನ್ನು ನನಗೆ ಇರುವ ಮಾಹಿತಿಯ ಪ್ರಕಾರ ನೀಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ನೀಡಿದ ಹೇಳಿಕೆ ಎಂದು ಸಾಕ್ಷಿಯು ದೃಢೀಕೃತ ನಕಲನ್ನು ಗುರುತಿಸಿರುತ್ತಾರೆ. ಅದನ್ನು ನಿಡಿ.**5** ಎಂದು ಗುರುತಿಸಲಾಯಿತು.

ಸಣ್ಣಚಾರಿಯವರ ಹೆಂಡತಿ ಚಂದ್ರಮ್ಮ ಏನಾಗಬೇಕು ಎಂದರೆ ನನ್ನ ಚಿಕ್ಕಮ್ಮ. ಸದರಿಯವರನ್ನು ಸಹ ಓ ಎಸ್ **272/2009** ರಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಸದರಿಯವರು ಅಕ್ರಮ ಕಟ್ಟಡ ನಿರ್ಮಿಸುತ್ತಿದ್ದಾರೆಂದು ಪೋಲೀಸರಿಗೆ ತಡೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದೆ

ಎಂದರೆ ಸರಿ. ನ್ಯಾಯಾಲಯ ನನ್ನ ತಂದೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲವೆಂದು ದಿಃ **25.02.2012** ರಂದು ಸದರಿ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಮೂನೆ **9** ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಪೋಟೋ ಪ್ರತಿವಾದಿ **1** ರವರಿಗೆ ಸಂಬಂಧಿಸಿದಾಗಿರುತ್ತದೆ ಎಂದು ಒಪ್ಪಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ.**6** ಎಂದು ಪೋಟೋವನ್ನು **6**(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನ **2.45** ಗಂಟೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.